

ಎಂ.ಎಸ್. ಆಶಾದೇವಿ

# ದಾಟಿ ಬಾ ನಿರ್ಭಯದ ನಿಲುವಿಗೆ

## ಜನ್ಮಶತಾಬ್ದಿ ನೆಪದಲ್ಲಿ ಜಿ.ಎಸ್. ಶಿವರುದ್ರಪ್ಪ ಮರುಕಳಿಕೆ

ಜಿ.ಎಸ್. ಶಿವರುದ್ರಪ್ಪ ಅವರ ಶತಮಾನೋತ್ಸವ ವರ್ಷದ (1926-2026) ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ಯಾಕೆ ಎಲ್ಲ ಕಾಲಕ್ಕೂ ಅವರು ಉಳಿಯುತ್ತಾರೆ ಎನ್ನುವುದನ್ನು ಚರ್ಚಿಸುವುದು ಹೆಚ್ಚು ಅರ್ಥಪೂರ್ಣವಾಗಿ ಇರಬಲ್ಲದು.

ವ್ಯಕ್ತಿಯಾಗಿ, ಬರಹಗಾರರಾಗಿ, ಆಡಳಿತಗಾರರಾಗಿ, ಜನಪ್ರಿಯತೆಯ ಶಿಖರವನ್ನು ಮುಟ್ಟಿದ ಕವಿಯಾಗಿ... ಹೀಗೆ ಯಾವ ನೆಲೆಯಲ್ಲಿ ನೋಡಿದಾಗಲೂ ಜಿಎಸ್‌ಎಸ್ ಅವರ ಕೇಂದ್ರ ಕಾಳಜಿ ಮಾತ್ರ ಒಂದೇ ಆಗಿತ್ತು. ಸಮುದಾಯವು ಇಡಿಯಾಗಿ ವಿವೇಕ ಮತ್ತು ಮಾನವೀಯತೆಯನ್ನು ಬುದ್ಧಿ ಭಾವಗಳಲ್ಲಿ ಒಳಗೊಳ್ಳಬೇಕು, ಆದರೆ ಅದು ಯಾವ ಕಾಲಘಟ್ಟದಲ್ಲೂ ಪೂರ್ಣವಾಗಿ ಸಾಕಾರಗೊಂಡಿದ್ದಿಲ್ಲ. ಹೀಗಿದ್ದೂ ಪ್ರತಿ ಕಾಲವೂ ಇದನ್ನೇ ತನ್ನ ಗುರಿಯಾಗಿ, ಕನಸಾಗಿ ಇಟ್ಟುಕೊಳ್ಳಲೇಬೇಕು. ಈ ನಿಟ್ಟಿನ ನಿರಂತರ ಪ್ರಯತ್ನ ನಾಗರಿಕತೆಯ ವಿಧಿಯೋ ಎನ್ನುವ ನಂಬಿಕೆಯಲ್ಲಿ ಜಿಎಸ್‌ಎಸ್ ತಮ್ಮೆಲ್ಲ ಕಾರ್ಯಗಳನ್ನೂ ಮುನ್ನಡೆಸಿದರು. ಇದನ್ನು ಕರ್ತವ್ಯದ ಬಿಗಿಹುಬ್ಬಿನ ವ್ಯಗ್ರತೆಯಲ್ಲಿ ಅವರು ಮಾಡದೇ, ಪ್ರೀತಿತತ್ತ್ವದಲ್ಲಿ ಮಾಡಿದರು ಎನ್ನುವುದು ಅವರನ್ನು ಬಲು ಎತ್ತರದಲ್ಲಿ ನಿಲ್ಲಿಸುತ್ತದೆ. ನಡೆ-ನುಡಿಗಳ ಅಂತರವನ್ನು ಕಡಿಮೆ ಮಾಡಿಕೊಳ್ಳುವುದರಲ್ಲಿ, 'ಎನ್ನ ಚಿತ್ತವು ಹತ್ತಿಯ ಹಣ್ಣಿನಂತೆ' ಎನ್ನುವ ಬಸವಣ್ಣನವರ ಆತ್ಮವಿಮರ್ಶೆಯ ಮನಸ್ಥಿತಿಯನ್ನು ಕಾಪಿಟ್ಟುಕೊಳ್ಳುವಲ್ಲಿ ಅವರು ತೋರಿಸಿದ ಮುತುವರ್ಜಿ, ಗುಣಗ್ರಾಹಿತ್ವವನ್ನು ಕೊನೆಯ ಗಳಿಗೆಯವರೆಗೂ ಉಳಿಸಿಕೊಂಡ ಪರಿ... ಈ ಎಲ್ಲವೂ ಇವರನ್ನು ವ್ಯಕ್ತಿಯಾಗಿಯೂ ಅಪಾರ ಗೌರವದ ಆವರಣದಲ್ಲಿ ನಿಲ್ಲಿಸುತ್ತವೆ. ಯಾವ ಅನ್ಯಾಯದ ವಿರುದ್ಧವೂ ದನಿಯೆತ್ತಿದ ಕೆಲವೇ ಕೆಲವು ಲೇಖಕರಲ್ಲಿ ಜಿಎಸ್‌ಎಸ್ ಅಗ್ರಗಣ್ಯರು.

ಶಿವರುದ್ರಪ್ಪನವರು ಶಿಖರಾರೋಹಿಯಾಗಿದ್ದರ